ಕಾರಣವನ್ನು ಉಳಿದವರು ಮೆಚ್ಚಿಕೊಂಡರು. ಅದಕ್ಕಿನ್ನೂ ಒಂದು ಕಾರಣವಿತ್ತು. ಬೆಲೆಬಾಳುವ ಸ್ಕೋಡಾ ಈಗಲೇ ಜನರ ಲಕ್ಷ್ಯವನ್ನಾಕರ್ಷಿಸುವುದು ಅವನಿಗೆ ಬೇಡವಾಗಿತ್ತು. ಈ ಚಿಕ್ಕ ಕಾರಾದರೆ ಹತ್ತರಲ್ಲಿ ಹನ್ನೊಂದನೆಯದಾಗಿರುತ್ತಿತ್ತು.

ತಾಣ ಸಮೀಪಿಸುತ್ತಿರುವುದನ್ನು ಜಿಪಿಎಸ್ ತೋರಿಸಿತು. ಒಂದೇ ರಸ್ತೆಯಾಗಿದ್ದಕ್ಕೆ ನಿಜವಾಗಿ ಅದರ ಅವಶ್ಯಕತೆಯಿರಲಿಲ್ಲ. ಆದರೆ ಲಭ್ಯವಿರುವ ಯಾವ ಸೌಲಭ್ಯವನ್ನೂ ಉಪಯೋಗಿಸದಿರುವ ಜಾಯಮಾನದವನಲ್ಲ ನಾಯ್ಡು. ಎಡಗಡೆ ಸ್ವಲ್ಪವೇ ದೂರದಲ್ಲಿ ಆಕಾಶದ ನೀಲಿಯನ್ನೆಲ್ಲ ಬಸಿದುಕೊಂಡಂತಿರುವ ದೊಡ್ಡ ಕೆರೆಯೊಂದು ಗೋಚರಿಸಿತು. ನೀರಿಂದ ತುಂಬಿಕೊಂಡ ಅದು ಅಣೆಕಟ್ಟಿನ ಹಿನ್ನೀರಿನಷ್ಟು ವಿಶಾಲವಾಗಿತ್ತು.

'ನೋಡ್ರೀ ಗೋಪಾಲ್, ಲೊಕೇಶನ್ ಅಂತ ಬೇಕಿದ್ರೆ ಗುರುತು ಹಾಕ್ಕೊಳ್ಳಿ. ಅಕಸ್ಮಾತ್ ಬೇಕಾದ್ರೆ ಉಪಯೋಗಿಸೋಣ.'

'ಕೆರೇಲಿ ಮಾಡುವಂಥಾದ್ದೇನಿರುತ್ತೆ?' ಕಮಲಮ್ಮ ಕೇಳಿದ್ದಕ್ಕೆ ನಗುತ್ತ ಉತ್ತರಿಸಿದ: 'ಚಂದನಿಕಾಗೆ ತ್ರೀ ಪೀಸ್ ಉಡಿಸಿ ಈಜೋ ದೃಶ್ಯ ಶೂಟಿಂಗ್ ಮಾಡೋಣಾಂತ, ಮುಂದಿನ ಸಿನಿಮಾದಲ್ಲಿ' ಕಮಲಮ್ಮ ಅಸಮಾಧಾನಗೊಂಡಿದ್ದು ಎದುರು ಕನ್ನಡಿಯಲ್ಲಿ ಗೋಚರಿಸಿತು.

ಇಪ್ಪತ್ತು ಕಿಲೋಮೀಟರು ಅಷ್ಟೆ. ಪೂರ್ತಿ ಊರೊಳಗೆ ಹೋಗೋದೇನೂ ಬೇಡ, ಮೊದಲೇ ಬಲಕ್ಕೆ ಸೊರಬದ ರಸ್ತೆಗೆ ತಿರುಗಿಕೊಳ್ಳಿ. ಒಂದು ಕಿಲೋಮೀಟರಲ್ಲಿ ಅದೇ ಕಾಣತದೆ ಅಂದಿದ್ದ ಶಿರಸಿಯಲ್ಲಿ ಹೋಟೆಲು ಮ್ಯಾನೇಜರು. ಎದುರು ಬಂದ ತಿರುವಿನಲ್ಲಿ ಬಲಕ್ಕೆ ಕಾರನ್ನು ತಿರುಗಿಸಿದವನಿಗೆ ನಿಮಿಷದಲ್ಲಿ ಅದು ಪ್ರತ್ಯೇಕವಾಗಿ ಗೋಚರಿಸತೊಡಗಿತು. ಹತ್ತಿರ ಹೋಗುತ್ತಿದ್ದಂತೆ ಇಲ್ಲಿಗೆ ತನ್ನ ಹುಡುಕಾಟ ಮುಗಿಯಿತು, ತನಗೆ ಬೇಕಾದ್ದು ಇದೇ ಅಂತ ಮನದಟ್ಟಾಗಿಬಿಟ್ಟಿತು.

2

ರಘುನಾಥ ದೇಶ್ವಂತರ ಮನೆಯಲ್ಲಿ ಇದು ವರ್ಷಕ್ಕೊಮ್ಮೆ ಬರುವ ಅತ್ಯಂತ ಆಪ್ತ ಸಮಯ. ಮನೆ ಗಿಲಗಿಚ್ಚಿಯಾಡಿಸಿದಂತೆ ಕಿಲಕಿಲಗುಡುತ್ತಿತ್ತು. ಎರಡು ವರ್ಷದವರಿಂದ ಹಿಡಿದು ಎಂಬತ್ತೈದು ವರ್ಷದವರೆಗೆ, ಹೆಣ್ಣು ಗಂಡು, ಉದ್ದ ಜಡೆ, ಬಾಬ್‌ಕಟ್ಟು, ಬಕ್ಕತಲೆಯವರು, ಅರೆ ನರೆತವರು, ಸಮೃದ್ಧ ಕಪ್ಪುಕೂದಲಿನವರು ಹೀಗೆ ವೈವಿಧ್ಯ ಇಲ್ಲಿ ಗುಂಪುಗೂಡಿದೆ. ಅದರೆ ಅಲ್ಲಿರುವ ಏಕತೆಯೆಂದರೆ ಅವರೆಲ್ಲ ಅವರ ರಕ್ತಸಂಬಂಧಿಗಳು ಅಥವಾ ಅವರ ಕೈಹಿಡಿದು ಅವರ ಮನೆಗೆ ಸೇರಿದವರು. ಅವರು ಚಿಕ್ಕವರಿರುವಾಗಿಂದ ಇದು ನೆನಪಿದೆ. ಎಷ್ಟೋ ತಲೆಮಾರಿಂದ ಇದು ಹೀಗೆ ನಡೆಯುತ್ತಲೇ ಬಂದಿದೆಯಂತೆ. ನವರಾತ್ರಿಯ ಸಮಯದಲ್ಲಿ ಎಲ್ಲೆಲ್ಲಿದ್ದವರೆಲ್ಲ ಮೂಲಮನೆಯಲ್ಲಿ ಸೇರಿ ಹಬ್ಬವನ್ನಾಚರಿಸಬೇಕು. ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನ ನೋಡಿ ಮಾತಾಡಲು ಇದೊಂದು ಸುಸಮಯ. ಈ ಮನೆಯಿರುವ ಜಾಗ ಸಾವಿರ ವರ್ಷಗಳಿಗು ಮೊದಲಿಂದ ಅವರ ವಂಶಸ್ಥರಿಗೆ ಸೇರಿದೆ ಎಂಬುದು ಹಲವು ದಾಖಲೆಗಳಿಂದ ದೃಢಪಡುತ್ತದೆ. ಇತಿಹಾಸದ ಹಲವು ಘಟನೆಗಳನ್ನು ಒಂದಕ್ಕೊಂದು ಹೊಂದಿಸಿ ನೋಡಿದರೆ ಅದಕ್ಕೂ ಹಿಂದೆ ಕಾಲದಲ್ಲಿ ಸರಿಯುತ್ತದೆ. ಊರವರೂ ಇದನ್ನು ಯಾವ ಆಕ್ಷೇಪಣೆಯಿಲ್ಲದೆ ಒಪ್ಪಿಕೊಳ್ಳುತ್ತಾರೆ.

ಅಷ್ಟು ಕಾಲದ ಹಿಂದಿಂದ ಕವಲಾಗುತ್ತ ಹೋದ ಜ್ಞಾತಿಬಂಧುಗಳೆಲ್ಲ ಸೇರಿದರೆ ಸಾವಿರಗಟ್ಟಲೆಯಾಗಬಹುದು. ಆದರೆ ಅವರೆಲ್ಲ ಎಲ್ಲೆಲ್ಲಿ ಕಾಲದಲ್ಲಿ ಮಸುಕಾದರೋ. ಅದರೆ ನಾಲ್ಕು ತಲೆಮಾರಿನವರು ಈಗಲೂ ಸಂಪರ್ಕದಲ್ಲಿದ್ದಾರೆ. ಇಂಗ್ಲೆಂಡ್ ಅಮೆರಿಕದಿಂದ ಹಿಡಿದು ಭಾರತದ ಪೂರ್ವ ಪಶ್ಚಿಮದಲ್ಲೆಲ್ಲ ಇದ್ದಾರೆ. ಎಲ್ಲ ಸರಿಯಾಗಿ ಒಟ್ಟಾದರೆ ಈಗಲೂ ನೂರೈವತ್ತು ಇನ್ನೂರು ಜನರಾಗುತ್ತಾರೆ. ಅದೂ ಇದೂ ಕಾರಣಕ್ಕೆ ಬರಲಾಗದವರು ಕೆಲವರಿದ್ದರೂ ಅರವತ್ತೆಪ್ಪತ್ತು ಜನ ಯಾವಾಗಲು ತಪ್ಪಿದ್ದಿಲ್ಲ. ಈ ನವರಾತ್ರಿಗೆ ಎಂಬತ್ತು ಜನ ಒಟ್ಟಾಗಿದ್ದಾರೆ. ನವರಾತ್ರಿಗೆರಡು ದಿನವಿರುವಾಗಿಂದ ಒಂದೊಂದು ಗುಂಪು ಆಗಮಿಸುತ್ತ, ಒಂದೊಂದು ಕೋಣೆಯಾಗಿ ತುಂಬುತ್ತ, ಹಜಾರದವರೆಗೆ ಆವರಿಸಿತ್ತು. ಹಣ್ಣಿಂದ ತುಂಬಿದ ಮರದಲ್ಲಿ ಹಕ್ಕಿಗಳ ಗದ್ದಲದಂತೆ ಈ ನವರಾತ್ರಿಯುದ್ದಕ್ಕೂ ಮನೆ ಗಿಲಿಗುಡುತ್ತಿತ್ತು. ನಿತ್ಯ ವಿಶೇಷ ಪೂಜೆ. ಒಂದೊಂದು ದಿನ ಒಂದೊಂದು ಭಕ್ಷ್ಯ, ಬೇರೆಬೇರೆ ತಿಂಡಿ. ನಿತ್ಯ ವಿಶೇಷ ಊಟ. ಸುದ್ದಿ ನಗು ವಿಚಾರವಿನಿಮಯ. ವಿಜಯದಶಮಿಯ ಸಾಯಂಕಾಲದಿಂದಲೇ ರಜೆಯಿಲ್ಲದವರು, ತುರ್ತು ಕೆಲಸವಿರುವವರು ನಿರ್ಗಮಿಸುವುದು ಶುರುವಾಗುತ್ತಿತ್ತು. 'ಮತ್ತೆ ಸಿಗೋಣ... ಆಶೀರ್ವಾದ ಮಾಡ್ರಿ' ಅನ್ನುತ್ತ ಕಾಲಿಗೆರಗುವವರು. ಅಜ್ಜ... ಮಾವ... ಚಿಗಪ್ಪ... ದೊಡಪ್ಪ ಯಾವಾವುದೋ ಆಪ್ತ ಸಂಬಂಧದಲ್ಲಿ ಒಬ್ಬೊಬ್ಬರದೂ ಸಂಬೋಧನೆ. ಒಂದೊಂದು ಮೂಲೆಯಲ್ಲೂ ಇಟ್ಟ ಚೀಲ ಸೂಟುಕೇಸುಗಳು ಖಾಲಿಯಾಗುತ್ತ, ಅಲ್ಲಿ ಒತ್ತರಿಸಿಕೊಳ್ಳುವ ಮೌನ ಇಷ್ಟಪಟ್ಟು ಬಯಸುವಂತದ್ದಲ್ಲ. ದೂರದಿಂದ ಅವರೆಲ್ಲ ಬರುವಾಗ ತರುವ ಉಡುಗೊರೆ ಬಟ್ಟೆಬರೆ, ಶಾಲು, ಸೀರೆ ಅವರು ಹೋದದ್ದನ್ನೇ




ನೆನಪಿಸುತ್ತವೆ. ಪುಟ್ಟ ಮಕ್ಕಳು ಕೊಟ್ಟ ಚಿಕ್ಕ ವಸ್ತುಗಳಂತೂ ಭಾರವಾಗಿ ಗಂಟಲಿಗೊತ್ತುತ್ತವೆ ಹಲವುದಿನ. ಇವತ್ತು ಬೆಳಗ್ಗೆ ಉಳಿದವರೆಲ್ಲಾ ಹೋಗಿ ಇಬ್ಬರು ಪಾಂಡುರಂಗ, ಶಾಂತಾರಾಮ ಉಳಿದಿದ್ದಾರೆ. ಅವರೂ ನಾಳೆ ನಾಡಿದ್ದು ಹೊರಟರೆಂದರೆ ಆಯ್ತು; ಹಣ್ಣು ಬಿಟ್ಟ ಮರದಲ್ಲಿ ವಿಶ್ರಮಿಸಿಕೊಳ್ಳಲು ಕೂತ ದಾರಿಹೋಕ ಹಕ್ಕಿಗಳಂತೆ ತಾವೇ ನಾಕುಜನ ಅನ್ನುವ ವಿಷಾದಭಾವದಲ್ಲಿ ಕೂತಿದ್ದರು ರಘುನಾಥ ದೇಶ್ವಂತ.

'ಅಪ್ಪ, ಹೋದ ಚಳಿಗಾಲದಲ್ಲಿ ಅದೇನೊ ಸಿಕ್ತು ಅಂದ್ರಲ್ಲ. ಅದನ್ನ ನಮಗೂ ತೋರಸ್ರಲ್ಲ?' ಶಾಂತಾರಾಮ ಮೌನವನ್ನು ಕಲಕಿದ. ಎಲ್ಲರೂ ಹೋದ ಖಾಲಿತನದ ಮನಃಸ್ಥಿತಿಯಿಂದ ಹೊರಬಂದು ಮಾತನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು. ಇದಕ್ಕೀಗ ಎಂತಾ ಅವಸರ ಇವನಿಗೆ ಅನ್ನುವ ಅಸಹನೆಯಾದರೂ, ಇವರಿಗೆ ಕುತೂಹಲ ಸಹಜವೇ ಅನ್ನಿಸಿ ಎದ್ದರು. ಮಲಗುವ ಕೋಣೆಯ ಪಕ್ಕ, ಎರಡು ಗೋಡೆಗಳ ನಡುವೆ ಮೆತ್ತಿಗೆ ಹೋಗುವ ದಪ್ಪದಪ್ಪನೆಯ ಮಣ್ಣಿನ ಮೆಟ್ಟಿಲು ಹತ್ತುವಾಗ ಬಲಕ್ಕು ಎಡಕ್ಕು ಮರದ ಕಪಾಟುಗಳಿವೆ. ದಾಟಿ ಉಳಿದೆರಡು ಮೆಟ್ಟಿಲು ಹತ್ತಿಹೋದರೆ ಮಹಡಿಯಲ್ಲಿ ದೊಡ್ಡ ಹಜಾರ, ಅದರಂಚಿನಲ್ಲಿ ಸಮಾಂತರವಾಗಿ ಮೂರು ಸಾಲುಗಳಲ್ಲಿ ಕೋಣೆಗಳು. ದೇಶ್ವಂತರು ಕೊನೆಯ ಎರಡು ಮೆಟ್ಟಿಲು ಹತ್ತದೆ ಎಡಗಡೆಯ ಕಪಾಟಿನ ಬಾಗಿಲು ತೆರೆದು ಒಳಗಿನ ಖಾನೆಯ ಹಲಗೆಯನ್ನು ಎರಡೂ ಕೈಯಲ್ಲಿ ಹಿಡಿದು ಎಳೆದರು. ಕಪಾಟಿನ ಒಳಭಾಗವಿಡೀ ಬಾಗಿಲಿನಂತೆ ಹೊರಗೆ ತೆರೆದುಕೊಂಡಿತು. ಹಿಂದೆ ಮತ್ತೆರಡು ಮುಚ್ಚಿದ ಬಾಗಿಲು. ಕೀಲಿ ತಿರುವಿ ತಳ್ಳಿದಾಗ ಬಾಗಿಲು ಒಳಗೆ ತೆಗೆದುಕೊಂಡಿತು. ಅಲ್ಲಿ ಕೆಳಗಿಳಿಯುವ ಮೆಟ್ಟಿಲುಗಳು. ಬಾಗಿಲು ಹಾಕಿಕೊಂಡು ಮೆಟ್ಟಿಲಿಳಿದು ಕೆಳಮಹಡಿಗೆ ಸೇರಿದ ಕೋಣೆಗಿಳಿದರು. ಆ ಕಿರಿದಾದ ಕೋಣೆಗೆ ಎಲ್ಲೂ ಬಾಗಿಲಿಲ್ಲ. ಗೋಡೆಗೆ ಸೇರಿಸಿ ನಿಲ್ಲಿಸಿದ ಮರದ ಎರಡು ಕಪಾಟುಗಳು. ಒಂದರ ಬೀಗ ತೆಗೆದು, ಒಳಗಿಟ್ಟ ವಸ್ತ್ರದ ಗಂಟಿಂದ ಒಂದು ವಸ್ತು ತೆಗೆದುಕೊಂಡವರು ಒಂದುಕ್ಷಣ ತಡೆದರು. ಆಮೇಲೆ ಏನೋ ಅನ್ನಿಸಿ 'ಇವರಿಗಲ್ದೆ ಮತ್ಯಾರಿಗೆ ತೋರಸೋದು? ನಂಗೂ ಏನು ಕಮ್ಮಿ ವಯಸ್ಸಾಗ್ತಾ?' ಅಂತ ಗೊಣಗಿಕೊಂಡು ಇಡೀ ಗಂಟನ್ನೇ ತೆಗೆದುಕೊಂಡು ಮೊದಲಿನಂತೆ ಬಾಗಿಲು, ಕಪಾಟನ್ನು ಮುಚ್ಚಿ ಇಳಿದು ಬಂದರು.

ಎಷ್ಟು ಹಳೆಯದೆಂದು ಹೇಳಲಾಗದ ಕರಿಯಮರದ ಕುರ್ಚಿ. ಚಿತ್ರ ಕೊರೆದ ದಪ್ಪನೆಯ ಕಾಲುಗಳು, ಆಧರಿಸುವ ತೋಳುಗಳು. ಅದರ ಬೃಹದಾಕಾರದಿಂದ ಸಿಂಹಾಸನದ ಭಾಸವಾಗುವಂತಿತ್ತು. ಅವರ ಹಿಂದಿನ ತಲೆಮಾರಿನ ಯಾರಿಗೊ ಬ್ರಿಟಿಷ್ ಅಧಿಕಾರಿಯೊಬ್ಬ ಇನಾಮಾಗಿ ಕೊಟ್ಟಿದ್ದಂತೆ. ಅದರ ಮೇಲೆ ಈಗ ದೇಶ್ವಂತರಲ್ಲದೆ ಬೇರಾರೂ ಕುಳಿತುಕೊಳ್ಳುವುದಿಲ್ಲ. ಉಪಯೋಗಿಸಿ ಉಪಯೋಗಿಸಿ ದೇಹಸ್ಪರ್ಶವಾಗುವ ಅದರ ಭಾಗ ಫಳಫಳ ಹೊಳೆಯುತ್ತಿತ್ತು. ಅದರ ಮೇಲೆ ಗಂಟನ್ನು